31 ವಿದ್ಯುತ್ ಉತ್ಪಾದನೆ ಯೋಜನೆಗಳ ನಿರ್ಮಾಣಕ್ಕೆ ಅನುಮತಿ ನೀಡಿದ್ದು ಇವುಗಳಿಂದ ಒಟ್ಟು 8300 ಮೆ.ವ್ಯಾ ಗಳ ಉತ್ಪಾದನೆಯನ್ನು ಮುಂಬರುವ ವರ್ಷಗಳಲ್ಲಿ ನಿರೀಕ್ಷಿಸಲಾಗಿದೆ.

ಇ) 1997ರ ಮಾರ್ಚ್ ತಿಂಗಳ ಅಂತ್ಯದವರೆಗೆ ವಿದ್ಯುತ್ ಪೂರೈಕೆಗಾಗಿ ರೈತರು ಸಲ್ಲಿಸಿದ್ದ ಅರ್ಜಿಗಳಲ್ಲಿ 103712 ಅರ್ಜಿಗಳು ಬಾಕಿ ಇವೆ. 97-98ನೇ ಸಾಲಿನಲ್ಲಿ 40,000 ಪಂಪುಸೆಟ್ಟುಗಳ ವಿದ್ಯುದೀಕರಣದ ಗುರಿಯನ್ನು ಮಂಡಳಿಯು ನಿಗದಿಪಡಿಸಿದ್ದು ಈ ವರ್ಷದ ಜುಲೈ ಅಂತ್ಯಕ್ಕೆ 8567 ಪಂಪುಸೆಟ್‌ಗಳ ವಿದ್ಯುದೀಕರಿಸಲಾಗಿದೆ. ಉಳಿದ ಪಂಪುಸೆಟ್ಟುಗಳ ನಿಯಮಾನುಸಾರವಾಗಿ ಹಂತ ಹಂತವಾಗಿ ವಿದ್ಯುದೀಕರಿಸಲಾಗುವುದು.

1997-98ರಲ್ಲಿ ಸಾರಾಯಿ ಮಾರಾಟ ಕುರಿತು

2386 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಸಾರಾಯಿ ಮಾರಾಟದ ಹಕ್ಕನ್ನು ಯಾವ ರೀತಿಯಿಂದ ನೀಡಲು ಸರ್ಕಾರವು ತೀರ್ಮಾನಿಸಿದೇ?

ಆ) ಪ್ರತಿ ಅಂಗಡಿಯನ್ನು ಟೆಂಡರ್ ಅಥವಾ ಹರಾಜಿನ ಮೂಲಕ ಡಿಕ್ರಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ? (ವಿವರಗಳನ್ನು ಒದಗಿಸುವುದು)

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) 1997-98ನೇ ಅಬಕಾರಿ ವರ್ಷದಲ್ಲಿ ದಿನಾಂಕ 1.7.97ರಿಂದ 31.7.97ರವರೆಗೆ 1996-97ನೇ ಸಾಲಿನ ಅಬಕಾರಿ ಗುತ್ತಿಗೆದಾರರೇ ಆ ವರ್ಷದ ಬಾಡಿಗೆ ಮೊತ್ತಕ್ಕೆ ಗುತ್ತಿಗೆ ನಿರ್ವಹಿಸಲು ಮುಂದುವರೆಸಲಾಗಿತ್ತು. ದಿನಾಂಕ 1.8.97 ರಿಂದ 31.10.97ರ ಅವಧಿಗೆ ಸಾರಾಯಿ ಚಿಲ್ಲರೆ ಮಾರಾಟದ ಗುತ್ತಿಗೆ ಹಕ್ಕನ್ನು ಹರಾಜು ಮೂಲಕ ವಿಲೇ ಮಾಡಲು ಅನುಮತಿ ನೀಡಿದೆ. ಅಬಕಾರಿ ವರ್ಷದ ಉಳಿದ ಅವಧಿಗೆ ಅನುಸರಿಸಬೇಕಾದ ನೀತಿ ಕುರಿತು ಸಚಿವ ಸಂಪುಟದ ಉಪ ಸಮಿತಿಯ ಪರಿಗಣನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಖಾಸಗಿಯವರಿಗೆ ಅಬಕಾರಿ ಡಿಸ್ಟ್ರಿಬೂಟರ್ಸ್ ಲೈಸನ್ಸ್ ವಿತರಣೆ

2387 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಅಬಕಾರಿ ಡಿಸ್ಟ್ರಿಬ್ಯೂಟರ್ಸ್ ಲೈಸನ್ಸ್ (ಸಿವಿಲ್-2) ಅನ್ನು ಖಾಸಗಿಯವರಿಗೆ ನೀಡಲು ಸರ್ಕಾರವು ನಿರ್ಧರಿಸಿರುವುದು ನಿಜವೇ?

ಅ) ಹಾಗಿದ್ದಲ್ಲಿ ಈ ಲೈಸೆನ್ಸ್‌ಗಳನ್ನು ಇಲ್ಲಿಯವರೆಗೂ ನೀಡದೆ ಇರಲಿಕ್ಕೆ ಕಾರಣಗಳೇನು ಮತ್ತು ಎಂದಿನಿಂದ ಈ ಲೈಸೆನ್ಸ್‌ಗಳನ್ನು ನೀಡಲು ಪ್ರಾರಂಭಿಸಲಾಗುವುದು?

ಇ) ಈ ವ್ಯವಸ್ಥೆಯಿಂದ ಆಗುವ ಲಾಭಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) 1968ರ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಾವಳಿಗಳ ನಿಯಮ 3ರ ಉಪ ನಿಯಮ 11ಕ್ಕೆ ಮತ್ತು ಇತರೆ ಸಂಬಂಧಪಟ್ಟ ನಿಯಮಗಳಿಗೆ ದಿನಾಂಕ 13.2.1997ರಂದು ತಿದ್ದುಪಡಿಗಳನ್ನು ತರಲಾಗಿದೆ. ತಿದ್ದುಪಡಿಗೊಂಡ ನಿಯಮಗಳ ಅನ್ವಯ ಯಾವುದೇ ಡಿಸ್ಟಿಲರಿ : ಬ್ರೀವರಿ : ವೈನರಿಯಿಂದ ಅಧಿಕೃತಗೊಂಡಿರುವ ವ್ಯಕ್ತಿ ಅಥವಾ ಸಂಸ್ಥೆಯು ಡಿಸ್ಟ್ರಿಬ್ಯೂಟರ್ಸ್ ಸನ್ನದು ಪಡೆಯಲು ಅರ್ಹರಾಗಿರುತ್ತಾರೆ

ಆ) ಕೆಲವು ಡಿಸ್ಟಿಲರಿಗಳು : ಬ್ರೀವರಿಗಳು : ವೈನರಿಗಳು ಎಂ.ಎಸ್.ಐ.ಎಲ್ ಅನ್ನು ತಮ್ಮ ಡಿಸ್ಟ್ರಿಬ್ಯೂಟರ್ ಆಗಿ ನೇಮಿಸಿದ್ದು ಸದರಿ ಡಿಸ್ಟಿಲರಿ : ಬ್ರೀವರಿ : ವೈನರಿಗಳ ಉತ್ಪನ್ನಗಳ ಮಾರಾಟ ಮಾಡಲು ಎಂ.ಎಸ್.ಐ.ಎಲ್‌ಗೆ ಡಿಸ್ಟ್ರಿಬ್ಯೂಟರ್ ಸನ್ನದ್ದುಗಳನ್ನು ನೀಡಲಾಗಿದೆ

ಇ) ಆರ್ಥಿಕ ಉದಾರೀಕರಣ ಧೋರಣೆಯ ದೃಷ್ಟಿಯಿಂದ ಖಾಸಗಿ : ವ್ಯಕ್ತಿ : ಸಂಸ್ಥೆಗಳಿಗೂ ಸಹ ಡಿಸ್ಟ್ರಿಬ್ಯೂಟರ್ಸ್ ಲೈಸನ್ಸ್ ಅನ್ನು ನೀಡುವುದರಿಂದ ವಹಿವಾಟಿನಲ್ಲಿ ಸ್ಪರ್ಧಾತ್ಮಕತೆ ಉಂಟಾಗುತ್ತದೆ ಮತ್ತು ಅದರ ಪರಿಣಾಮವಾಗಿ ಸರ್ಕಾರದ ಆದಾಯ ವೃದ್ಧಿಸಲು ಅವಕಾಶವಿರುತ್ತದೆ.

ಬೆಂಗಳೂರಿನಲ್ಲಿ ಭೋವಿ ಅಸೋಸಿಯೇಷನ್‌ಗೆ ಸಿ.ಎ. ನಿವೇಶನ ಹಂಚಿಕೆ

2388 - ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಸ್ಪಿನ್ ಟೌನ್ ಬಡಾವಣೆ, ಬಿ.ಡಿ.ಎ. ಕ್ವಾರ್ಟರ್ಸ್ ಹತ್ತಿರ ಭೋವಿ ಅಸೋಸಿಯೇಷನ್‌ಗೆ ಸಿ.ಎ. ನಿವೇಶನ ಹಂಚಿಕೆ ಆಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರವು ಅವರಿಗೆ ಒಂದು ಬದಲಿ ನಿವೇಶನ ಗುರ್ತಿಸಿ ಮೇಲ್ಕಂಡ ಸಿ.ಎ. ನಿವೇಶನವನ್ನು ಬಸ್ ನಿಲ್ದಾಣಕ್ಕೆ ಕಾದಿರಿಸಬಹುದೇ?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಹೌದು ಆಸ್ಪಿನ್ ಟೌನ್ ಬಡಾವಣೆ, ಬಿ.ಡಿ.ಎ. ಪ್ಲಾಟ್ಸ್ ಹತ್ತಿರ ಕಲ್ಯಾಣ ಮಂಟಪಕ್ಕೆ ಕಾದಿರಿಸಿರುವ ಸಿ.ಎ. ನಿವೇಶನವನ್ನು ಕರ್ನಾಟಕ ಭೋವಿ ವೆಲ್‌ಫೇರ್ ಅಸೋಸಿಯೇಷನ್‌ರವರಿಗೆ ಗುತ್ತಿಗೆ ಆಧಾರದ ಮೇಲೆ ಕಲ್ಯಾಣ ಮಂಟಪ ನಿರ್ಮಿಸುವ ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗಿರುತ್ತದೆ.